Regd No BG 155

Sri
"SATYAVADI"
— DAILY —
MYSORE 4
45 th Year

Protect the cow

— ಶ್ರೀ —

ಸತ್ಯವಾದಿ

22—4—1961

ಪತ್ರಿಕೆಯನ್ನು ಪ್ರತಿಯೊಬ್ಬ ಚಂದಾದಾರರಿಗೂ ಪ್ರತಿಯೊಬ್ಬ ಲೇಖನಗಳಿಗೆ "ಸತ್ಯವಾದಿ" ಪತ್ರಿಕೆಯನ್ನು ತಪ್ಪದೇ ಓದಿ

ದಿನಪತ್ರಿಕೆ ತಿಂಗಳಿಗೆ 6 ರೂ.

ಗೋಪಂರಕ್ಷಕ

ಪ್ರಕಾಶಕರು— ಅರಮನೆ ಸಂಸ್ಥೇದಾರ್ ಎಂ. ವಿ ಸುಬ್ಬಂಕಯ್ಯರು [ಬೆಲೆ ಪ್ರತಿ 3 ಪೈ

ಕೂಬಾದಲ್ಲಿ ಹೊರಗಿನವರ ಕೈವಾಡ ಬೇಡ

ಗೊಂದಲ

ಎಕ್ಸಸಂಸ್ಥೆ 21 — ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಕ್ಯೂಬಾ ಪ್ರಶ್ನೆಯ ಬಗ್ಗೆ ಬರ್ಬ ನಡೆಯುತ್ತಿದ್ದಾಗ ಎರಡು ನಿರ್ಣಯಗಳಲ್ಲಿ ಯಾವುದಕ್ಕೆ ಆದ್ಯತೆ ಕೊಡಬೇಕೆಂಬ ವಿಚಾರದಲ್ಲಿ ವಿವಾದವೆದ್ದು ಒಬ್ಬರನ್ನೊಬ್ಬರು ದೈವತಾಡುವುದರಲ್ಲಿ ಸಭೆಯು ಮುಕ್ತಾಯಗೊಂಡಿತ.

★

ನಿರ್ಬಂಧ

ಬೆಂಗಳೂರು 21— ಶಾಸನ ಸಭೆಯ ಸದಸ್ಯರುಗಳು ಇಳಿದುಕೊಳ್ಳುವ ಲಿಜಿಸ್ಲೆಟಿವ ಹೋಂನಲ್ಲಿ ಯಾವುದೇ ಅಕೃತ್ಯ ಇನ್ನು ಮುಂದೆ ನಡೆಯದಂತೆ ಕೆಲವು ನಿರ್ಬಂಧಗಳನ್ನು ಜಾರಿಮಾಡಲಾಗಿದೆ— ಅಧಿಕಾರಿಗಳ ಅಪ್ಪಣೆಯಿಲ್ಲದೆ ಅತಿಥಿಗಳನ್ನು ಇಟ್ಟುಕೊಳ್ಳಕೂಡದು ; ವಾಸ ನಿರೋಧ — ಮಹಿಳಾ ಸದಸ್ಯರಿಗೆ ಪ್ರತ್ಯೇಕ ಸ್ಥಾನ ಏರ್ಪಡಿಸುವ ಯೋಜನೆ ಇದೆ ಎಂದೂ ಹೇಳಲಾಗಿದೆ.

★

ವಿವೇಚನೆಗೆ ಹೊಸ ಸಂಸ್ಥೆ

ಕೆಪಬ್ಲಾಂಕ 20 ಪೋರ್ಚುಗಲ್ ಮತ್ತು ವಿದೇಶಿ ವಸಾಹತುಗಳ ರಾಷ್ಟ್ರೀಯ ಮತ್ತು ನಾಯಕ ಎ ವ್ಯಾತಂತ್ರ್ಯ ಸಾಧನೆಯ ಹೋಂತಟದಲ್ಲಿ ತಮ್ಮ ಪ್ರಯತ್ನಗಳನ್ನು ಸಂಘಟಿಸಲು ಇಲ್ಲೊಂದು ಸಂಯುಕ್ತ ಸಂಘವನ್ನು ಸ್ಥಾಪಿಸಿದರು.

★

ಪಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಕ್ಕಯ್ಯನ್ನಜೋಯಿಸರಿಂದ
ಪ್ರತಿನಿತ್ಯ ಅಪ್ಪಟ ಶುದ್ಧ

ವಂದನಾರ್ಪಣೆ

ನವದೆಹಲಿ 21— ಆಕ್ರಮಣಕಾರರ ವಿರುದ್ಧ ಕ್ಯೂಬಾ ಜನತೆಯು ನಡೆಸಿದ ಹೋರಾಟಕ್ಕೆ ಭಾರತವು ದೊಡ್ಡ ಮಟ್ಟದ ಬೆಂಬಲ ಸೂಚಿಸಿರುವುದಕ್ಕಾಗಿಯೂ ಪ್ರಧಾನಿ ನೆಹರೂರವರು ಸಂಸತ್ತಿನಲ್ಲೂ ಭಾರತೀಯ ಪ್ರತಿನಿಧಿ ವಿಶ್ವಸಂಸ್ಥೆಯಲ್ಲೂ ವ್ಯಕ್ತಪಡಿಸಿರುವ ಸ್ಪಷ್ಟಾಭಿಪ್ರಾಯಕ್ಕಾಗಿಯೂ ದೆಹಲಿಯಲ್ಲಿನ ಕ್ಯೂಬಾ ರಾಯಭಾರ ಪ್ರತಿನಿಧಿಯು ವಂದನೆ ಸಲ್ಲಿಸಿದರು.

ಪಾಕಿಸ್ತಾನಕ್ಕೆ ಪರಾರಿ

ನವದೆಹಲಿ 28— ಳಿದ ತಿಂಗಳು ತ್ರಿಪುರಾದಲ್ಲಿರುವ ಒಂದು ಉಪಖಜಾನೆಯಿಂದ 98566 ರೂಗಳ ಭಧಾವಣೆ ಮಾಡಿರುವನೆಂದು ಗುರುತಿಸಲ್ಪಟ್ಟಿರುವ ಒಬ್ಬ ಪೋತದಾರನು ಪೂರ್ವ ಪಾಕಿಸ್ತಾನಕ್ಕೆ ಪರಾರಿಯಾಗಿರುವನೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಮೊಸಕ್ಕೆ ಶಿಕ್ಷೆ

ನವದೆಹಲಿ 21— ಕಾಲ್ಪನಿಕ ಸಂಸ್ಥೆಯೊಂದರ ಹೆಸರಿನಲ್ಲಿ ಅನುದಾ ಲೈಸನ್ಸುಗಳನ್ನು ಪಡೆದ ಡೆಹಲಿಯ ಚಾಂದನೀ ಚೌಕದಲ್ಲಿರುವ ವರ್ಮ ವೇರಹೌಸಿನ ಮಾಲೀಕನಾದ ರಾಧೇಕಿಷನ್ ವರ್ಮ ಎಂಬಾತನಿಗೆ 18 ತಿಂಗಳ ಕಠಿಣ ಶಿಕ್ಷೆ ಮತ್ತು 2000 ರೂಗಳ ಜುಲ್ಮಾನೆ ವಿಧಿಸಲಾಯಿತು.

ಪಂಚಾತಿ ಸೆಕ್ರಟೆರಿಗಳು

ಬೆಂಗಳೂರು 21— ಇದುವರಿಗೆ ಒಟ್ಟು 6605 ಜಸರನ್ನು ಪಂಚಾಯತಿ ಕಾರ್ಯದರ್ಶಿಗಳಾಗಿ ನೇವಿ ಸಲಾಗಿದೆಯೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

ಪ್ರಥಮವಲ್ಲ

ಪ್ಯಾರಿಸ್ 21— ಬಾಹ್ಯಾಕಾಶಕ್ಕೆ ಕಳುಹಿಸಲ್ಪಟ್ಟಿ ಗಾಗರಿನ್ ಪ್ರಥಮ ಮಾನವನಲ್ಲವೆಂದೂ, ಇದಕ್ಕೂ ಮೊದಲು ರಷ್ಯಾ ಸರ್ಜಿ ಇಲೂಷಿನ್ ಎಂಬುವನನ್ನು ಕಳಿಸಿ ಅವನು ವಾಪಸ್ಸು ಬಂದು ಮಂಕಾಗಿ ಗಾಢನಿದ್ರೆಯಿಂದ ನರಳುತ್ತಾ ಮಾಸ್ಕೊ ಆಸ್ಪತ್ರೆಯಲ್ಲಿರುವನೆಂದೂ ಫ್ರೆಂಚು ರೇಡಿಯೋ ಮತ್ತು ಟೆಲಿವಿಜ್ಞ ವಿಶೇಷ ಪ್ರತಿನಿಧಿ ತಿಳಿಸಿರುವನು:

o o

ವೃದ್ಧೆಯ ಔದಾರ್ಯ

ಭೋಪಾಲ್ 19— ವಿಲಾಸಪುರ ಜಿಲ್ಲೆಯ ಸಿಯೋನಿ ಗ್ರಾಮದ ಶ್ರೀಮತಿ ಚಕ್ರಿಯಾಬಾಯಿ ಎಂಬ ಒಬ್ಬ ವೃದ್ಧ ಮಹಿಳೆ ಗ್ರಾಮದಲ್ಲಿ ಬಾಲಕಿಯರಿಗೆ ಒಂದು ಪ್ರಾಥಮಿಕ ಶಾಲೆ ಕಟ್ಟಲು ತನ್ನ ಎಲ್ಲ ಸ್ವತ್ತನ್ನೂ ದಾನಮಾಡಿದ್ದಾಳೆ

o o

ಪ್ರಧಾನಿಗೆ ಚಿಟ್ಟೆರಿಕೆ

ಕೇಪ ಟೌನ್ 20— ದಕ್ಷಿಣ ಆಫ್ರಿಕದಲ್ಲಿರುವ ಎಲ್ಲ ಜನಾಂಗಗಳ ಪ್ರತಿನಿಧಿಗಳಾಷ್ಟ್ರೀಯ ಸಮ್ಮೇಳನವನ್ನು ಮೇ 31 ರೊಳಗೆ ಕೂಡಿಸದಿದ್ದರೆ ದಕ್ಷಿಣ ಆಫ್ರಿಕಾ ಗಣರಾಜ್ಯದಾಗುವ ಹೊತ್ತಿನಲ್ಲಿ ದೇಶದಾದ್ಯಂತ ಮತ ಪ್ರದರ್ಶನಗಳಾಗುವುದೆಂದು ವರ್ಣ ಜನಾಂಗ ಕಾಂಗ್ರೆಸ್ಸಿನ ನಾಯಕರು ಪ್ರಧಾನಿ ವೆರ್ವೋರ್ಡರಿಗೆ ಪತ್ರ ಬರೆದು ಎಚ್ಚರಿಸಿರುವರು.

o o

ಅರಮನೆ ಕೊಡಿಡಿದ್ದು

ನವದೆಹಲಿ 21 .... ಪಾಟಿಯಾಲಾ ಮಹಾರಾಜರವರ ಮೋತೀಬಾಗ್ ಅರಮನೆಯನ್ನು ಸರಕಾರ 25-7 ಲಕ್ಷ ರೂಗಳಿಗೆ ಕೊಂಡ ವಿಚಾರವಾಗಿ ಲೋಕಸಭೆಯಲ್ಲಿ ಪ್ರಶ್ನೋತ್ತರಗಳಾದವು.

ನವದೆಹಲಿ 21 — ಕ್ಯೂಬಾದ ಹೊರ ದೇಶಗಳ ಹಸ್ತಕ್ಷೇಪ ಕೂಡದೆಂದು ಪ್ರಧಾನಿ ನೆಹರು ಲೋಕಸಭೆಯಲ್ಲಿ ಘೋಷಿಸಿದರು — ಹಸ್ತಕ್ಷೇಪದಿಂದ ಮೈದಿ ಇಲ್ಲದ ಫಲಿತಾಂಶ ಒದಗಬಹುದೆಂದೂ ಹೇಳಿದರು.

★

ಬೆಂಗಳೂರು 21.... 1960 ರ 12 ತಿಂಗಳಲ್ಲಿ ಒಟ್ಟು 2 ಲಕ್ಷ ಮೈಲಿಗಳಿಗಿಂದ ಸ್ವಲ್ಪ ಹೆಚ್ಚಡಮೆ ಪ್ರವಾಸ ಮಾಡಿರುವರೆಂದೂ, 1633 ದಿವಸಗಳೆಂದೂ ಪ್ರವಾಸ ಭತ್ಯ, ದಿನಭತ್ಯಕ್ಕಾಗಿ ರೂ 1.05 ಕ್ಕೆ ಬಿಲ್ ಮಾಡಿದೆಯೆಂದೂ ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

ಅಸ್ಸಾಮ 20— ಭಾರತ ಹೈಕಮಿಷನರು ಕಛೇರಿಯ ಪ್ರಥಮ ಕಾರ್ಯದರ್ಶಿಯಾ ಕೊಲಿಯು ಅಲೋಪದ ಸಂಬಂಧದಲ್ಲಿ ಇಂದು ದಕ್ಷಿಯಾಧೀಶರ ಮುಂದೆ ಹಾಜರು ಮಾಡಲ್ಪಟ್ಟ ಸಾನಿ ಫಂಜಿಯನ್ನು ಶಾ ॥ 27 ರವರೆಗೂ ಪೋಲೀಸು ಕಸ್ಟಡಿಗೆ ರಿಮ್ಯಾಂಡು ಮಾಡಲಾಯಿತು.

ಬೆಂಗಳೂರು 21— 129 ಗಂಟೆಗಳ ಕಾಲ (6 ದಿನ) ಒಂದೇ ಸವನೆ ಸೈಕಲ್ ಸವಾರಿ ಮಾಡುವ ಪ್ರದರ್ಶನವನ್ನು ಈ ಬೆಳಗ್ಗೆ ಶಿವಾಜಿ ನಗರದಲ್ಲಿರುವ ಬ್ಲಾಕ್ ಪಲ್ಲಿ ಕಾರ್ಪೋರೇಷನ್ನು ಕ್ರೀಡಾಂಗಣದಲ್ಲಿ ತೊಡಗಿದ ಶ್ರೀ ಜೋಸೆಫ್ ಥೋಲ್ ಕರು ಪ್ರಾರಂಭಿಸಿದರು.

ನವದೆಹಲಿ ಕೆಗ— ರಾಷ್ಟ್ರಪತಿಗಳ ಅಧಿಕಾರಕ್ಕೆ ಯಾರೇ ಆಗಲಿ ಎರಡು ಬಾರಿಗಿಂತ ಹೆಚ್ಚಿನ ಅವಧಿಗೆ ಅಧಿಕಾರ ದಂತೆ ವಿಧಿಸಬೇಕೆಂದು ಕಮ್ಯುನಿಷ್ಟ್ ನಾಯಕ ಶ್ರೀ ಭೂಪೇಶಗುಪ್ತರು ರಾಜ್ಯಸಭೆಯಲ್ಲಿ ಪ್ರಬಲ ಒತ್ತಾಯ ಮಾಡಿದರು ; ಇದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ಮಂಡಿಸಿದರು.

ಭಾರತದೊಂದಿಗೆ ಅಮೇರಿಕಾದ ಆದಿಕಾಲದ ವ್ಯಾಪಾರ

— 2 —

[illegible] ಕ್ಯಾಪ್ಟನ್ನಿಗೆ ಕಾದಿಟ್ಟಿತ್ತಾರೆ

ಭಾರತದೊಂದಿಗೆ ವ್ಯಾಪಾರ ನಡೆಸುತ್ತಿದ್ದ ಭಾರತೀಯ ವರ್ತಕರು ಪಂಪ [illegible] ಪ್ರತೀಕ್ಷೆಯಾ ಬೆಳೆದವು ; ಭಾರತದ ಬಂದರು ಕಟ್ಟೆಯಲ್ಲಿ ಕಳ್ಳೇರಿಯೊಂದ [illegible] ಕಿರಿಯಾಗುವುದೆಂದರೆ ಅಂದಿನ ಕಾಲದಲ್ಲಿ ವಿಶೇಷವಾದ ಹೆಮ್ಮೆ, ಪೂರ್ವಾಭಿ [illegible] ಭಾರತಕ್ಕೆ ಯಾನ ಮಾಡಿದ ಯಾವ ನಾವಿಕನೂ ಬರೆಗೈಯಲ್ಲಿ ಹಿಂ [illegible] : ಕೇಪ್ ಕಾಡಿನಲ್ಲಿ (ಮೆಸಾಚುಸೆಟ್ಸ್) ಪುಷ್ಟಿಯಾಗಿ ಬೆಳೆದ [illegible] ಹಡಗೊಬ್ಬಳು ಈಸ್ಟ್ ಇಂಡಿಯಾ ನೌಕಾ ಕೆಪ್ಟನನ್ನು ಮೂಲೆಯಾ [illegible] ಗುಟ್ಟು ಕಾಯ್ದು ಸಿಂತಿರುತ್ತಿದ್ದಳು ಎಂಬುದಾಗಿ ಅಮೇರಿಕದ ಇತಿಹಾಸಕಾರನೊಬ್ಬ [illegible] ಬರೆದಿದ್ದಾನೆ.

ಕಲ್ಕತ್ತದ ಶ್ರೀಮಂತ ವರ್ತಕ

ಕಲ್ಕತ್ತಾದಲ್ಲಿ ಈಸ್ಟ್ ಇಂಡಿಯಾ ಕೆಪ್ಟನ್ನುಗಳು ಎಲ್ಲಿಯೂ ಪ್ರಖ್ಯಾತ ವರ್ತಕನಾದ ರಾಂದೂಲಾಲ ಡೇ ಯವರ ಕಚೇರಿಗೆ ಪದೇಪದೇ ಹೋಗುತ್ತಿದ್ದ ಬಡ ಶಾಲಾ ಉಪಾಧ್ಯಾಯನ ಮಗನಾಗಿ ಜನಿಸಿ ಭಿಕ್ಷಕ ಅಜ್ಜನಿಂದ ಬೆಳೆಸಲ್ಪಟ್ಟ ರಾಂದೂಲಾಲನು ಸ್ವಪ್ರಯತ್ನದಿಂದ ಗೌರವವನ್ನೂ ಭಾರೀ ಶ್ರೀಮಂತಿಕೆಯನ್ನೂ ಅರ್ಜಿಸಿದ್ದನು ; ಇಷ್ಟಾದರೂ ಪ್ರಾಮಾಣಿಕತೆ, ಸತ್ಸಂಧತೆ, ಸಾತ್ವಿಕತೆ ಹಾಗೂ ಪರೋಪಕಾರ ಸುನೀತಿಯ ಲಕ್ಷಣಗಳನ್ನು ತಪ್ಪದೆ ಪಾಲಿಸುತ್ತ ಅವುಗಳಿಗಾಗಿ ಅಮೇರಿಕಾ ವರ್ತಕರು ಗೌರವವನ್ನೂ ಮೆಚ್ಚುಗೆಯನ್ನೂ ಗಳಿಸಿದ್ದನು. ಅನೇಕ ದೃಷ್ಟಿಗಳಿಂದ ವ್ಯಾಪಾರವನ್ನು ಕೈಗೊಂಡ ಆದ್ಯ ಪ್ರವರ್ತಕ ಎಂಬುದಾಗಿ ಅತನನ್ನು ಕರೆಯಬಹುದು. ಅಮೆರಿಕದ ಕೆಪ್ಟನ್ನುಗಳಿಗೆ ಬಹು ಉದಾರವಾಗಿ ಸಾಲಗಳನ್ನು ಕೊಡುತ್ತಿದ್ದ ; ಭಾರತದ ಸಾಮಾನುಗಳನ್ನು ಬಹು ಎಚ್ಚರಿಕೆಯಿಂದ ಆಯ್ಕೆ ಮಾಡಲು ಸಹಕರಿಸುತ್ತಿದ್ದ.

ಅಮೇರಿಕನು ಸಹ ಆತನಿಗೆ ತನ್ನ ಕೃತಜ್ಞತೆಗಳನ್ನು ಅರ್ಪಿಸಲು ಹಿಂ ಬೇಟ್ಟು ಹಾಕುತ್ತಿರಲಿಲ್ಲ ; ಬೋಸ್ಟನ್, ನ್ಯೂಯಾರ್ಕ್, ಸೇಲಂ, ಮಾರ್ಬಲ್‌ಹೆಡ್ ಮತ್ತು ಫಿಲಡೆಲ್ಫಿಯಾಗಳ 30 ಮಂದಿ ವರ್ತಕರು, ಪುನ್ಸಿಸಿದ್ದ ಚಿತ್ರಗಾರ ಗೆಲ್ಬರ್‌ನ ಸ್ಟೂಪರ್ಟ್ ಚಿತ್ರಿಸಿದ ಜಾರ್ಜ್ ವಾಷಿಂಗ್ಟನ್ನಿನ ತೈಲಚಿತ್ರವೊಂದನ್ನು ಕೊಳ್ಳಲು ಸಾಕಷ್ಟು ಪ್ರಮಾಣದ ಹಣವನ್ನು ಸಂಗ್ರಹಿಸಿದರು ; ಮನುಷ್ಯಾಕಾರದ ತನ್ನ ಅಧ್ಯಕ್ಷನ ಈ ಚಿತ್ರವನ್ನು ಅವರು 1804 ರಲ್ಲಿ ರಾಂದೂಲಾಲನಿಗೆ, ಈ ಹಿಂದೂ ವರ್ತಕನ ವಿಷಯದಲ್ಲಿ ತಮಗಿದ್ದ ಮೆಚ್ಚುಗೆಯ ಸಾಕ್ಷ್ಯವಾಗಿಯೂ ದೂರದೂ ರಂದ ಈ ಎರಡು ದೇಶಗಳ ನಡುವಿನ ನಿಕಟ ಸಂಬಂಧದ ಗಣನೆಗಾಗಿಯೂ ಒಪ್ಪಿಸಿದರು.

ಕಳೆದ ಶತಮಾನದಲ್ಲಿ ರಾಂದೂಲಾಲನ ವಂಶೀಯರು, ಈ ಭಾವಚಿತ್ರವನ್ನು ಮಾಡಿದಂತಾದರೂ ಅದು ಈಗಲೂ ಕಲ್ಕತ್ತೆಯಲ್ಲಿ ಹೆಡ್ ಸಿ. ವ.ಲ್ಲಿಕ್ ರವರ ಒಳಆವರಣದಲ್ಲಿದೆ ; ಕಾಲದ ಕೈಮಾಟದ ಫಲವಾಗಿ ಈ ಚಿತ್ರ ಸ್ವಲ್ಪ ಮಾಸಿ, ಸ್ವಲ್ಪ ವಾಟ್ಟಿಗೆ ಕಪ್ಪಾಗಿದೆಯಾದರೂ, ಈಗಲೂ ಮೂಲ ತೈಲಗಿನ ಚೌಕಟ್ಟಿನಲ್ಲಿಯೇ ಸುಸ್ಥಿತಿಯಲ್ಲಿದೆ. (ಮಂ. ಪ್ರ.)

ಶ್ರೀಂ ಶ್ರೀಮಾನವನು ಪ್ರಯುಕ್ತ ಸೋಮವಾರ ಪತ್ಯವಾದಿ ಕಾರ್ಯಾಲಯಕ್ಕೆ ರಜ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪಶುಪೈದ್ಯ, ಕೃಷಿಹಾಗೂ ವಿಚಾರಗಳ ಪ್ರಚಾರ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

At Woodlands : Crowded 3rd Week

ಹರ್ಕ್ಯೂಲಿಸ್ ಅನ್‌ಛೇನ್ಡ್

ಪ್ರಪಂಚದ ಅತ್ಯಂತ ಬಲಶಾಲಿಯಾದ ಮಾನವನ ಅದ್ಭುತ ವಿಜಯ, ಯಶಸ್ಸಿಗೆ ಅಪ್ರತಿಮ ಸಾಹಸ ಪ್ರದರ್ಶನದ ಈ ಚಿತ್ರವನ್ನು ಇಂದೇ ನೋಡಿ

HERCULES UNCHAINED

Steve Reeves as Hercules — — in Eastman Color

See— War of Chariots, Arena of Tigers, Court of Lover, Temptress Lydia, Contest of Giants, Combat of Kings

ಆಪೆರಾ— **20-4-61** ರಿಂದ

ಅಮೋಘ ಆರಂಭ

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಹಿಂದಿ ಚಿತ್ರ

ಆಪ್ಪ ಘರ್ [ಹಿಂದಿ]

ತಾರಾಗಣ— ಪ್ರೇಮನಾಥ್, ನಂದಾ, ಶ್ಯಾಮ, ಕಪೂರ್

ದಿನವಹಿ 3 ಆಟಗಳು

SHAKTI SUDHA

A Superb Tonic

Our Bangalore Sales Depot address—

71/4 Arcot Sreenivasachar St., Bangalore 2.

Edited, Printed & Published by the Proprietor Dharma Prachara Nirata M. S. KrishnaRao, at the Satyavadi Press Chamarajapuram, Mysore 4.